ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ದಿನಾಂಕಃ 17-03-2018

ಮುಂದುವರಿದ ಮುಖ್ಯ ವಿಚಾರಣೆಃ- ಶ್ರೀ ಎಸ್‌ಎಂಎಸ್ ವಕೀಲರಿಂದ ಅರ್ಜಿದಾರರ ಪರವಾಗಿ,

ನನ್ನ ಪ್ರಮಾಣಪತ್ರದಲ್ಲಿ ಬರೆದ ಎಲ್ಲಾ ವಿಷಯಗಳು ನಿಜವಿರುತ್ತವೆ. ನಾನು ಖುದ್ದು ಹೇಳಿ ಬರೆಸಿ ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

28-02-2018 ರಂದು ಸಂಜೆ 7.30 ಗಂಟೆ ಸಮಯದಲ್ಲಿ ನಾನು ಮನೆಗೆ ಹೋದಾಗ ನನ್ನ ಹೆಂಡತಿ ಸಭಾ ತಿಳುವಳಿಕೆ ನೋಟೀಸನ್ನು ನನ್ನ ಕೈಗೆ ಕೊಟ್ಟಿರುತ್ತಾರೆ. ಸಾಕ್ಷಿ ಸದ್ರಿ ತಿಳುವಳಿಕೆ ನೋಟೀಸನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ನಾನು ನಿಪಿ-1 ಕ್ಕೆ ದೃಢೀಕರಣ ಮಾಡಿ ಸಹಿ ಮಾಡಿರುತ್ತೇನೆ. ನಮೂನೆ 1 ನಾಮಪತ್ರವನ್ನೂ ಸಹ ನನ್ನ ಹೆಂಡತಿ ನನಗೆ ದಿನಾಂಕ 28-02-2018 ರಂದು ಸಂಜೆ 7.30 ಗಂಟೆ ಸಮಯದಲ್ಲಿ ನೀಡಿರುತ್ತಾಳೆ.

(ಮುಂದುವರಿದ ಮುಖ್ಯವಿಚಾರಣೆಗೆ ಅರ್ಜಿದಾರರ ಪರ ವಕೀಲರು ಸಮಯಕೋರಿರುತ್ತಾರೆ.)

(ತೆ. ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.
ಸಹಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಭಟ್ಕಳ